

# ತಿರು ತಿರುಗಿಯು ಹೊಸದಾಗಿರಿ ಎನುತಿದೆ ಋತುಗಾನ

ಶ್ರಾವಣಕ್ಕೆ ಸ್ವಾಗತ ಕೋರುವ ರೀತಿಯಲ್ಲಿ ಅಲಹಾಬಾದ್‌ನಲ್ಲಿ ಕಳೆದ ವಾರ ನಡೆದ ಕುದುರೆಗಾಡಿ ಸವಾರಿ ಸ್ಪರ್ಧೆ. ಚಿತ್ರ / ಎಎಫ್‌ಪಿ

**ಆಹಾ! ಈ ಸೊಬಗಿನ ಸೆರೆಮನೆಗೆ ಏನೆನ್ನೋಣ? ಶ್ರಾವಣ... ಶ್ರಾವಣ... ಶ್ರಾವಣ...**

**■ ಮಾಂಟೊ**

ಬೇಲಿಗೆ ಹಬ್ಬಿದ ಬಳ್ಳಿಯ ಎಳೆಸುಳಿಯ ತುದಿಗೆ ತೊಟ್ಟಿಕ್ಕಲು ಸಿದ್ಧವಾಗಿ ನಿಂತ ಹನಿ, ಮೋಡದ ಕಣ್ತಪ್ಪಿಸಿ ಬಂದ ಸೂರ್ಯನ ಎಳೆಬಿಸಿಲಿಗೆ ಫಳಫಳ ಹೊಳೆಯುತ್ತಿದೆ. ಮೈತುಂಬ ಹೂವರಳಿಸಿಕೊಂಡು ನಿಂತ ನಂದಬಟ್ಟಲ ಗಿಡ, ತಿಳಿಗಾಳಿಯ ಗಾನಕ್ಕೆ ತಲೆದೂಗುತ್ತಿದೆ. ಅರರೆ... ಹೊಸದಾಗಿ ಹುಟ್ಟಿದ ನೀರ ಒರತೆಯ ಜೊತೆಯಲ್ಲಿ ಹುಲ್ಲಗರಿಕೆಗಳು ಚಿನ್ನಾಟವಾಡುತ್ತಿವೆ. ಚಿಗುರನ್ನೆಲ್ಲ ಮೂಸಿ ಮುತ್ತಿಕ್ಕಿ ಜಿಗಿಜಿಗಿದು ಓಡುತ್ತಿರುವ ಎಳೆಗರುವಿನ ನರ್ತನವ ಕಂಡು ಮಾವಿನ ಮರದ ಮೇಲಿನ ಸೀತಾಳೆದಂಡೆಯೂ ಮುದಗೊಂಡಿದೆ. ಅಂಗಳ ತುದಿಯಲ್ಲಿ ಮೈಮರಿಯುತ್ತ ನಿಂತ ಹೂಗಿಡಗಳು ದುಂಬಿಗಳ ಜೊತೆ ಚೌಕಾಸಿ ನಡೆಸಿವೆ.

ಆಷಾಢವೆಂಬುದು ತಿಳಿನಿದ್ರೆಯಲ್ಲಿರುವ ಹಸುಗೂಸಿನ ನಗುವಂಥ ಮಾಸವಾದರೆ, ಶ್ರಾವಣ ಎಚ್ಚೆತ್ತ ಕೂಸು ಕೈಕಾಲು ಬಡಿದು, ಗೆಜ್ಜೆ ಕುಣಿಸಿ ಅಕ್ಕಳಿಸುವ ಸಂಭ್ರಮ.

ಮಾಡ ಮೇಲೆ, ಮರದ ಮೇಲೆ, ನೆಲದ ಮೇಲೆ, ಹೊಲದ ಮೇಲೆ, ಶಾಲೆಗೆ ಹೊರಟ ಪುಟ್ಟಕ್ಕನ ಕೊಡೆಯ ಮೇಲೆ, ಮೈದುಂಬಿ ಹರಿಯುತ್ತಿರುವ ಹಳ್ಳದ ಮಡಿಲ ಮೇಲೆ, ಕಣ್ಣಳತೆಯ ಮೀರಿ ಹರಡಿ ಮಲಗಿದ ಕಡಲ ಮೇಲೆ... ಎಲ್ಲಿ ನೋಡಿದರಲ್ಲಿ ನೀರು ನೀರು ನೀರು... ಗಳಿಗೆಗೊಮ್ಮೆ ಸುರಿದು, ಗಿಡಮರಬಳ್ಳಿಗಳ ಮೈಮೆಲೆಲ್ಲ ಹರಿದು ಹಸಿ ಹಸಿರಾಗಿ ಹೊಳೆಯುತ್ತಿವೆ. ಆಹಾ! ಈ ಸೊಬಗಿನ ಸೆರೆಮನೆಗೆ ಏನೆನ್ನೋಣ? ಶ್ರಾವಣ... ಶ್ರಾವಣ... ಶ್ರಾವಣ...

'ಬಸಿರ ನೆಲಕೆ ಹೂವ ಮುಡಿಸಲೆಂದು ಬಂದ ಸಂಭ್ರಮ' – ಬೇಂದ್ರೆಯಜ್ಜನ ಕಣ್ಣಿಗಲ್ಲದೆ ಇನ್ನಾರಿಗೆ ಶ್ರಾವಣದ ನೆಲ ಹೀಗೆ ಕಾಣಲು ಸಾಧ್ಯ? ಆದರೆ ಈ ಬಸಿರ ನೆಲದ ಸಂಭ್ರಮ ಸುಮ್ಮನೆ ಬಂದಿದ್ದಲ್ಲ. ಅದರ ಹಿಂದೆ ಭೂಹೆಣ್ಣಿನ ಅನಾದಿ ವಿರಹವಿದೆ; ಬಿಸಿಯುಸಿರ ಶಾಖವಿದೆ; ಕಣ್ಣೀರ ಶೋಕವಿದೆ.

'ಮಣ್ಣುಹೆಣ್ಣು ಬಾನೊಡೆಯನಿಂದ ಅಗಲಿಹಳನಾದಿಯಿಂದ
ವಿರಹ ಬವಣೆಯಲಿ ತಿರುಗೆ ತಿರುಗುವಳು ಹೊತ್ತು ಸುತ್ತಿನಿಂದ
ಕಣ್ಣ ನೀರು ಕಡಲಾಗಿ ಕಾದು ಉಗಿಯಾಗಿ ಮೋಡವಾಗಿ
ಎದೆಗೆ ಉದುರೆ ಬಾನಿಂದ ನವಿರುವಳು ಹೃದಯ ಹಚ್ಚಗಾಗಿ'
(ಮೇಘದೂತ)

***

ಭೀಮನ ಅಮಾವಾಸ್ಯೆಯ ಕತ್ತಲು ಮುಗಿದು ದಿನದಿನವೂ ಬೆಳಗುಮುಖವ ಹಿಗ್ಗಿಸಿಕೊಳ್ಳುತ್ತ ಚಂದ್ರಮ ಶ್ರಾವಣವ ಕೈ ಹಿಡಿದು ಕರೆತರುತ್ತಿದ್ದಾನೆ. ಭೂಮಿಯೇನೋ ಮುಗಿಲಿಂದ ಜಡಿದು ಸುರಿದ ಪ್ರೇಮವರ್ಷಕ್ಕೆ ಎದೆಗೊಟ್ಟು ಹೃದಯವನ್ನು ಹಚ್ಚಗಾಗಿಸಿಕೊಂಡಿದ್ದಾಳೆ. ಹಸಿತನದಲ್ಲಿ ಇಡೀ ನಿಸರ್ಗವೇ ನವಿರಾಗಿ ಅರಳುತ್ತಿದೆ. ಆದರೆ ಈ ಸಂಭ್ರಮವ ಕಂಡು ಮೈಮರೆವ ಕವಿ ಮಾತ್ರ ಮೌನವಾಗಿದ್ದಾನೆ. ಇಡೀ ಮನುಕುಲವೇ ಜ್ವರಬಂದ ಮರುದಿನದ ಎಳೆಮಗುವಿನಂತೆ ಮಂಕಾಗಿ ಕೂತಿರುವಾಗ ಕವಿಗೆ ಹೇಗೆ ತಾನೆ ಹಾಡು ಹುಟ್ಟೀತು?

ಈ ಸಲದ ಶ್ರಾವಣವೆಂಬ ಸೃಷ್ಟಿಸಂಭ್ರಮದ ಋತುಗಾನ ಮನುಷ್ಯನ ಪಾಲಿಗೆ ಶೋಕ ಶ್ಲೋಕವಾಗಿ ಪರಿಣಮಿಸಿದೆ. ಹೂವಿದ್ದೂ ಮುಟ್ಟಲಾಗದ, ಚಿಗುರಿದ್ದೂ ಸವರಲಾಗದ ವಿಚಿತ್ರ ಸಂಕಷ್ಟಕ್ಕೆ ತನ್ನ ತಾನೇ ನೂಕಿಕೊಂಡು ಪರಿತಪಿಸುತ್ತಿದ್ದಾನೆ. ದಿನಕ್ಕೊಂದರಂತೆ ಬರುವ ಹಬ್ಬದ ಊಟದಲ್ಲಿನ ಸಿಹಿತಿಂಡಿಗಳ ಗಣಿತದಲ್ಲಿ ತೊಡಗಬೇಕಾಗಿದ್ದ ಮನಸ್ಸು, ಕೊರೊನಾ ವೈರಸ್‌ನ ಕಾವಳಸ್ಪರ್ಶಕ್ಕೆ ನಿಲುಕಿದವರ, ಉಸಿರೆಳೆದುಕೊಂಡು ತೆರಳಿದವರ ಲೆಕ್ಕದಲ್ಲಿ ಭೀತಗೊಂಡಿದೆ. ನಿಸರ್ಗದಿಂದ ದೂರವಾಗಿ ತಾನೇ ಕಟ್ಟಿಕೊಂಡ ಕೋಟೆಯಲ್ಲೀಗ ಅವನು ಬಂಧಿಯಾಗಿದ್ದಾನೆ. ಇದನ್ನು ಆತ್ಮರಕ್ಷೆ ಅನ್ನಬೇಕೋ, ಪ್ರಕೃತಿ ವಿಧಿಸಿದ ಶಿಕ್ಷೆ ಅನ್ನಬೇಕೋ?

ಒಂದೆಡೆ ಮರಣಭಯದಿಂದ ಮುದುಡಿರುವ ಮನುಕುಲ; ಇನ್ನೊಂದೆಡೆ ಜೀವಪ್ರೇಮದಿಂದ ನಳನಳಿಸುತ್ತಿರುವ ನಿಸರ್ಗ. ಇವೆರಡರ ಮುಖಾಮುಖಿಯ ನಡುವಿನ ಮೌನವನ್ನು ಹೇಗೆ ಅರ್ಥೈಸಿಕೊಳ್ಳುವುದು? ಈ ಋತುವಿನ ಹೆಸರಲ್ಲಿಯೇ ನಮ್ಮ ಅರಿವಿನ ಬಾಗಿಲು ತೆರೆಯುವ ಕೀಲಿಕೈಯನ್ನು ಕೂಡ ಸೃಷ್ಟಿಶಕ್ತಿ ಇರಿಸಿದಂತಿದೆ. ಶ್ರಾವಣ ಎಂಬ ಹೆಸರು ಶ್ರವಣನಕ್ಷತ್ರದಿಂದ ಬಂದಿದ್ದು. ಶ್ರವಣ ಎಂಬುದಕ್ಕೆ 'ಕೇಳುವುದು' ಎಂಬ ಅರ್ಥವೂ ಇದೆಯಲ್ಲವೇ? ಹೇಳುವುದರಲ್ಲಿಯೇ ಮೈಮರೆತಿದ್ದ ಮನುಷ್ಯನಿಗೀಗ ಕೇಳುವ ಕಾಲ. ಮೈಬಾಗಿ ಮನಬಾಗಿ ನಿಸರ್ಗ ಉಸುರುತ್ತಿರುವ ಸೃಷ್ಟಿಚಕ್ರದ ಗುಟ್ಟನ್ನು ವಿನಮ್ರವಾಗಿ ಆಲಿಸುವ ಕಾಲ. ಹೀಗೆ ಮೈಯೆಲ್ಲ ಕಿವಿಯಾಗಿಸಿಕೊಂಡು ಕೇಳಿದರೆ ಬೇಂದ್ರೆಯವರದೇ ಇನ್ನೊಂದು ಸಾಲು ಅನುರಣಿಸುತ್ತದೆ. ಸದ್ಯದ ಕರಾಳತೆಯಿಂದ ದಾಟಿಕೊಳ್ಳುವ ದಾರಿ ತೋರುತ್ತದೆ.

'ಬಂಧನದೊಳಿದ್ದವರ ಬಂಧನವ ಬಿಡಿಸುವ ಬಂದಿಕಾರಾ ಶ್ರಾವಣಾ'
(ಗಂಗಾವತರಣ)

ಹೌದು! ಶ್ರಾವಣ, ಗೋಕುಲದಲ್ಲಿ ಕೃಷ್ಣ ಜನ್ಮವೆತ್ತಿದ ಮಾಸವೂ ಹೌದು. ಹುಟ್ಟುತ್ತಲೇ ಮುಕುಂದ ತನ್ನ ತಂದೆ ತಾಯಿಯ ಬಂಧನವ ಬಿಡಿಸಿದ. 'ಸ್ವಾತಂತ್ರ್ಯೋತ್ಸವ'ದ ಸಂಭ್ರಮ ಇರುವುದೂ ಈ ಮಾಸದಲ್ಲಿಯೇ. ಸೊಬಗಿನ ಸೆರೆಮನೆಯ ಚಿತ್ರಕಟ್ಟುತ್ತಲೇ, ಸಂಕಷ್ಟದ ಕೈ ಕೊಳಗಳಿಂದ ಬಿಡಿಸಿಕೊಳ್ಳುವ ನಂಬಿಕೆಯನ್ನೂ ಶ್ರಾವಣ ನಮಗೆ ನೀಡುತ್ತದೆ.

'ತಿರು ತಿರುಗಿಯು ಹೊಸದಾಗಿರಿ ಎನುತಿದೆ ಋತುಗಾನ' ಎಂಬ ಬೇಂದ್ರೆಯಜ್ಜನ ಸಾಲು ಶ್ರಾವಣದ ಸಂದೇಶವೂ ಹೌದು. ಶ್ರಾವಣದ ಜಡಿಮಳೆಗೆ ಮನಸ್ಸನ್ನು ತೊಳೆದುಕೊಂಡು ಹೊಸದಾಗುವ – ಒಳಿತುಗೊಳ್ಳುವ ಸಂಕಲ್ಪವನ್ನು ನಾವು ಕೈಗೊಳ್ಳಬೇಕಷ್ಟೆ. ■